# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಮಲ್ಲೇಶ್ವರಂ, ಬೆಂಗಳೂರು – 560003

## KARNATAKA SCHOOL EXAMINATION AND ASSESSMENT BOARD

Malleshwaram Bengaluru-560003

## 2025–26ರ ಎಸ್,ಎಸ್,ಎಲ್,ಸಿ. ಮಾದರಿ ಪ್ರಶ್ನೆಪತ್ರಿಕೆ

## S.S.L.C MODEL QUESTION PAPER - 03 : 2025-26

**ವಿಷಯ : ದ್ವಿತೀಯ ಭಾಷೆ ಕನ್ನಡ**

**SUBJECT : Second Language Kannada**

| | |
|---|---|
| **ಸಮಯ : 3 ಗಂಟೆ** | **ವಿಷಯ ಸಂಕೇತ : 33K** |
| **ಗರಿಷ್ಠ ಅಂಕಗಳು : 80** | **Subject Code : 33K** |

**ಪರೀಕ್ಷಾರ್ಥಿಗಳಿಗೆ ಸಾಮಾನ್ಯ ಸೂಚನೆಗಳು :**

1. ಈ ಪ್ರಶ್ನೆ ಪತ್ರಿಕೆಯು 38 ಪ್ರಶ್ನೆಗಳನ್ನು ಹೊಂದಿದೆ.
2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.** **4x1=4**

1. **‘ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕ ಅಕ್ಷರಗಳ ಸಂಖ್ಯೆ :**
   - ಎ) ೦೯
   - ಬಿ) ೧೩
   - ಸಿ) ೦೨
   - ಡಿ) ೦೫

2. ‘ದಿಗ್ವಾಚಕ’ ಪದವಿದು :
   - ಎ) ನದಿ
   - ಬಿ) ಎಂತಹ
   - ಸಿ) ಮೂಡಣ
   - ಡಿ) ಹಲವು

3. **‘ಪುಸ್ತಕದಲ್ಲಿ’** ಪದದಲ್ಲಿರುವ ವಿಭಕ್ತಿ
   - ಎ) ದ್ವಿತೀಯಾ
   - ಬಿ) ಸಪ್ತಮಿ
   - ಸಿ) ಷಷ್ಠಿ
   - ಡಿ) ಚತುರ್ಥಿ

4. ಆಗಮ ಸಂಧಿಗೆ ಉದಾಹರಣೆಯಾಗಿರುವ ಪದ :
   - ಎ) ಗುರುವನ್ನು
   - ಬಿ) ಮಾತಿಲ್ಲ
   - ಸಿ) ಮಳೆಗಾಲ
   - ಡಿ) ದೇವಾಲಯ

**II ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ** **12x1=12**

5. ಶ್ರೀಪಂಡಿತಾರಾಧ್ಯ ಶಿವಾಚಾರ್ಯರು ಏನೆಂದು ಖ್ಯಾತರಾಗಿದ್ದಾರೆ?
6. ಪುಟ್ಟರಾಜರು ಯಾವ ಯಾವ ಭಾಷೆಗಳಲ್ಲಿ ಪಾಂಡಿತ್ಯಗಳಿಸಿದ್ದರು?
7. ಸಸ್ತನಿಗಳ ಆಶ್ರಯದಾಣಗಳು ಯಾವುವು?
8. ಹ್ಯೂಯೆನ್‌ತ್ಸಾಂಗ್ ಹರಿದ್ವಾರವನ್ನು ಏನೆಂದು ಕರೆದಿದ್ದಾನೆ?
9. ಗೋಪಾಲನ ಬೆಳಗಿನ ಮುಖ್ಯ ಕೆಲಸ ಯಾವುದಾಗಿತ್ತು?
10. ಹಾ.ಮಾ. ನಾಯಕರ ಪ್ರಕಾರ ಸೌಜನ್ಯ ಹೇಗೆ ಅರಳಬೇಕು?
11. ಚೈತ್ರದಲ್ಲಿ ಯಾವುದರ ವಾಲಗ ನಡೆದಿರುತ್ತದೆ?
12. ಕವಿ ಸಿ.ಪಿ.ಕೆ ಅವರು ನಮ್ಮ ಕರ್ತವ್ಯಗಳನ್ನು ಹೇಗೆ ಮುಗಿಸಬೇಕೆಂದು ಹೇಳಿದ್ದಾರೆ?
13. ಜನಪದರ ಪ್ರಕಾರ ಕುಣಿಗಲ್ ಕೆರೆಯು ಹೇಗೆ ಬಾಗಿದೆ?
14. ಬೆಟ್ಟದ ಮೇಲೆ ಮನೆಯ ಮಾಡಿದರೆ ಯಾವುದಕ್ಕೆ ಅಂಜಬಾರದು ಎಂದು ಅಕ್ಕಮಹಾದೇವಿ ಹೇಳಿದ್ದಾರೆ?
15. ಬಸವಣ್ಣನವರ ವಚನಗಳ ಅಂಕಿತನಾಮ ಯಾವುದು?
16. ಅರ್ಜುನನು ಧುರಕ್ಕೆ ಬೆನ್ನು ಹಾಕಿದರೆ ಏನು ಪ್ರಾಪ್ತಿಯಾಗುತ್ತದೆ ಎಂದನು?

**III. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ** **8x2=16**

17. ಸರ್ವಜ್ಞ ಕವಿಯು ಕೃಷಿಯ ಬಗ್ಗೆ ಹೇಳಿರುವ ವಚನ ಯಾವುದು?
18. ಹಕ್ಕಿಗಳು ಗೂಡನ್ನು ಎಲ್ಲೆಲ್ಲಿ ಕಟ್ಟಬಲ್ಲವು ವಿವರಿಸಿ.
19. ಮಹಾಭಾರತದಲ್ಲಿ ಗಂಗಾದ್ವಾರದ ಬಗ್ಗೆ ಉಲ್ಲೇಖಗೊಂಡಿರುವ ಪ್ರಸಂಗಗಳನ್ನು ತಿಳಿಸಿ.
20. ಅಸೌಜನ್ಯ ನಡವಳಿಕೆಗೆ ಎರಡು ಉದಾಹರಣೆ ಕೊಡಿ.
21. ಕಬ್ಬಕ್ಕಿಗಳು ಬಾಯಿ ಬಿಡಲು ಕಾರಣವೇನು?
22. ಬಸವಣ್ಣನವರು 'ದೇಹವೇ ದೇಗುಲ'ವೆಂಬ ಕಲ್ಪನೆಯನ್ನು ಹೇಗೆ ವರ್ಣಿಸಿದ್ದಾರೆ?
23. ವೈದ್ಯರ ಮನೆಯಿಂದ ಕಳವಾದ ವಸ್ತುಗಳು ಮರಳಿ ಸಿಕ್ಕ ಬಗೆ ಹೇಗೆ?
24. ಕವಿಯ ಅಭಿವ್ಯಕ್ತಿಯಲ್ಲಿ ಕನ್ನಡ ನಾಡಿನ ವಿಸ್ತಾರವೇನು?

**IV ಕವಿ/ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ** **1x3=3**

25. 'ಸಿ ಪಿ ಕೃಷ್ಣಕುಮಾರ್'

**V ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ** **1x3=3**

**26. ಧುರದ ಲೋಡಿದ ಪಾತಕವ ಭೂ**
ಸುರರು ಕಳೆದಪರಶ್ವಮೇಧವ
ಧರಣಿಯಲಿ ಪ್ರತ್ಯೇಕ್ಷವಾಗಿಯೂ ಮಾಡಬಹುದೆಮಗೆ
ಸುರರ ಸತಿಯರನೊಲ್ಲೆವೆಮಗೆ
ಮ್ಮರಸುತನವೆಮಗಿಂದ್ರ ಪದವಿಯು ಬಿಟ್ಟುಕಳುಹೆಂದ.

**VI ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ** **1x3=3**

27. 'ಮಗುವಿನ ಮುಖವು ಚಂದ್ರನಂತೆ ಮನೋಹರವಾಗಿದೆ'

**VII ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ.** **1x3=3**

**28.** 'ಸತ್ಯಕ್ಕೆ ಸಾವಿಲ್ಲ; ಸುಳ್ಳಿಗೆ ಸುಖವಿಲ್ಲ'

ಅಥವಾ

'ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ'

**VIII ಕೆಳಗಿನ ವಾಕ್ಯ ಅಥವಾ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **5x3=15**

29. "ಅದಕ್ಕೂ ಒಳ್ಳೆಯ ದಿನ ಬರಲಿ ಎಂದು ಹಾರೈಸಬೇಕು"
30. "ಮಗು ಇಂದಿನಿಂದ ಇದು ನನ್ನ ಹಾರ್ಮೋನಿಯಂ ಅಲ್ಲ"
31. "ಭಗವಂತ ನಿಮಗೆ ಜೀವನ ಎನ್ನುವ ಕಾಫೀ ಕೊಟ್ಟಿದ್ದಾನೆ"
32. "ಅಮ್ಮನ ಮಾತು ಸುಳ್ಳಾಗಲಾರದು!"
33. "ಎಲ್ಲರೆದೆಗಳ ತುಂಬ ಸವಿಚೈತ್ರವು"

**IX ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1x4=4**

**34.** ಏಕಾಂಗಿ ----------------------------

--------------------------------

--------------------------------

------------------------ ನಡೆದನು.

**ಅಥವಾ**

ಕಾಡು ಕಾಡು ---------------------

--------------------------------

--------------------------------

------------------------- ಕಂಡಿತು

**X ಕೆಳಗಿನ ಪ್ರಶ್ನೆಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **1x4=4**

35. ಅಡಿಗರ ಪ್ರಕಾರ ಜೀವನ ಯಾವಾಗ ಸಾರ್ಥಕವಾಗುತ್ತದೆ ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ

ಅಥವಾ

ಗುರಿ ಪದ್ಯದ ಸಾರಾಂಶವನ್ನು ನಿಮ್ಮ ಮೆಚ್ಚುವ ಅಂಶಗಳೊಂದಿಗೆ ವಿವರಿಸಿ

**XI ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ** **1x4=4(2+2)**

36. ಯುರೋಪಿನಲ್ಲಾಗಲಿ, ಅಮೇರಿಕದಲ್ಲಾಗಲಿ ನೀರು ಕೊಡುವ ಸಂಪ್ರದಾಯವಿಲ್ಲ. ಹಿಂದೆ ಇತ್ತೇನೋ, ಈಗಂತೂ ಇಲ್ಲ. ನೀರು ಸಲೀಸಾಗಿ ಎಲ್ಲಂದರಲ್ಲಿ ಪುಕ್ಕಟ್ಟೆಯಾಗಿ ನಿಮಗೆ ಖಂಡಿತ ಸಿಗದು. ನಮ್ಮಲ್ಲಿಯಂತೆ ರೈಲು ನಿಲ್ದಾಣಗಳಲ್ಲಿ, ಬಸ್ಸು ನಿಲ್ದಾಣಗಳಲ್ಲಿ, ವಿಮಾನ ನಿಲ್ದಾಣಗಳಲ್ಲೂ 'ದುಡ್ಡಿಲ್ಲದೆ ಕುಡಿಯಬಲ್ಲ' ನೀರನ್ನು ಇರಿಸುವುದಿಲ್ಲ. ಭಾರತದಿಂದ ಹೊರಗೆ ಕಾಲಿಟ್ಟರೆ, ಉಳಿದೆಲ್ಲವೂ 'ನೀರು ಕೊಡದ ನಾಡುಗಳು' ಎಂಬುದು ನನ್ನ ಇಲ್ಲಿಯವರೆಗಿನ ಅನುಭವ. ಎರಡು ವಾರ ಕಳೆದಿದೆ, ಊರೂರು ಅಲೆದಿದ್ದಾಯಿತು, ದಿನವೂ ಅಸಾಧ್ಯ ಬಾಯಾರಿಕೆ, ವಿದೇಶಗಳಲ್ಲಿ ಕೋಲಾಗಳು, ಫ್ರೆಂಚ್ ವೈನ್, ಬಿಯರ್, ಬಾಟಲಿಯಲ್ಲಿ ಹಣ್ಣಿನ ರಸ ಧಾರಾಳವಾಗಿ ದೊರೆಯುತ್ತವೆ, ಕುಡಿಯಲು ನೀರು ಮಾತ್ರ ಸಿಗದು.

ಮನೆಯ ಹೊರಗೆ ಕಾಂಪೌಂಡ್ ಗೋಡೆಗೆ ಸಣ್ಣ ತೊಟ್ಟಿ ಕಟ್ಟಿ, 'ದನಕರುಗಳು ಕುಡಿದು ಹೋಗಲಿ' ಎಂದು ನೀರು ತುಂಬಿಡುತ್ತಿದ್ದ ಬಾಲ್ಯದ ದಿನಗಳು ನನಗಿನ್ನೂ ನೆನಪಿವೆ. ನಾನು ದಿಲ್ಲಿಗೆ ಬಂದು, ವಿದೇಶಕ್ಕೆ ಹಾರಿದೆ. ದಿಲ್ಲಿಯಲ್ಲೋ ಧಗಧಗ ಬಿಸಿಲು. ಆದರೆ ಯಾರೋ ಪುಣ್ಯಾತ್ಮರು ಅಲ್ಲಿ ದೊಡ್ಡ ಮಣ್ಣಿನ ಮಡಿಕೆಗಳಲ್ಲಿ ನೀರು ತುಂಬಿಟ್ಟಿದ್ದರು. ಆನೇಕ ಗುರುದ್ವಾರಗಳ ಬಳಿ, ಸ್ವಯಂ ಸೇವಕರು ನೀರಿನ ದೊಡ್ಡ ಕೊಳಾಯಿ ಹಿಡಿದು, ನಿಲ್ಲಿಸಿದ ಆಟೋ, ಬಸ್ಸು ಹಾಗೂ ದಾರಿಹೋಕರಿಗೆಲ್ಲ ನೀರು ತುಂಬಿ ತುಂಬಿ ಕುಡಿಸುವುದನ್ನು ನೋಡಿದ್ದೇನೆ. ರೋತಕ್ ರಸ್ತೆಯ ಅತ್ತೆಯ ಮನೆಯೊಳಗೆ ಕಾಲಿಡುತ್ತಿದ್ದಂತೆ 'ತಣ್ಣನೆಯ ನೀರು' ತಂದು ಕೈಗಿಟ್ಟರು. ದಿಲ್ಲಿಯ ಧೂಳು ಹಾದಿಗಳೆಲ್ಲ ಮರೆತವು. ಮನೆಗೆ ಬಂದವರಿಗಂತು 'ಮೊದಲು ನೀರು ಕೊಡುವ' ಸಂಪ್ರದಾಯ, ಡಾಬಾ ಆಗಲಿ, ದರ್ಶಿನಿ ಆಗಲಿ, ಪಂಚತಾರಾ ಹೋಟಲೇ ಆಗಲಿ ಮೊದಲು ನೀರು ಮೇಜಿನ ಮೇಲೆ ಕುಳಿತುಕೊಳ್ಳುತ್ತದೆ. ಪುಕ್ಕಟ್ಟೆಯಾಗಿ ಕೊಡುವ ನೀರು. ಆದರೆ ನಾನೀಗ 'ನೀರು ಕೊಡದ ನಾಡು'ಗಳಲ್ಲಿ ಅಲೆಯುತ್ತಿದ್ದೇನೆ.

**ಪ್ರಶ್ನೆಗಳು :**

ಅ. ಗುರುದ್ವಾರಗಳ ಬಳಿ ಸ್ವಯಂ ಸೇವಕರು ಏನು ಮಾಡುತ್ತಿದ್ದಾರೆ?

ಆ. ವಿದೇಶಗಳಲ್ಲಿ ಬಾಯಾರಿದಾಗ ಧಾರಾಳವಾಗಿ ಏನೇನು ದೊರೆಯುತ್ತದೆ?

**XII ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ** **1x4=4**

37 ರಾಷ್ಟ್ರೀಯ ಭಾವೈಕ್ಯತೆ

**ಅಥವಾ**

ಶಿಕ್ಷಣದ ಮಹತ್ವ

**XII ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.** **1x5=5**

38. ನೀವು ಕೋಲಾರ ಜಿಲ್ಲೆ ಸಂಗಮಪುರದ ನಿವಾಸಿ 'ಜಗದೀಶ' ಎಂದು ಭಾವಿಸಿಕೊಂಡು ನಿಮ್ಮ ಊರಿನಲ್ಲಿನ ಬೀದಿ ದೀಪಗಳನ್ನು ಸರಿಪಡಿಸಿ ಕೊಡುವಂತೆ ಕೋರಿ ಕೋರಿ, ಗ್ರಾಮ ಪಂಚಾಯತಿಯ ಅಧ್ಯಕ್ಷರಿಗೆ ಮನವಿ ಪತ್ರ ಬರೆಯಿರಿ

**ಅಥವಾ**

ನಿಮ್ಮನ್ನು ತುಮಕೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಮೋಕ್ಷ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ ಕನ್ನಡ ರಾಜ್ಯೋತ್ಸವದ ಬಗ್ಗೆ ಮೈಸೂರಿನ ಕುವೆಂಪು ಬಡಾವಣೆಯಲ್ಲಿ ವಾಸವಾಗಿರುವ 'ಶ್ರೇಯಾ' ಎಂಬ ಹೆಸರಿನ ಗೆಳತಿಗೆ ಪತ್ರವನ್ನು ಬರೆಯಿರಿ.

************************